ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ನೇವಿ-1/ಅಉಅ/97/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ:___-06-2022

## ಸುತ್ತೋಲೆ

ವಿಷಯ: 2021-22ನೇ ಶೈಕ್ಷಣಿಕ ಸಾಲಿನ ಪ್ರಸ್ತುತ ಚಾಲ್ತಿಯಲ್ಲಿರುವ 2, 4 & 6ನೇ Semester ನ ಕಾರ್ಯಭಾರದ ವಿವರಗಳನ್ನು E.M.I.S. ನಲ್ಲಿ Upload ಮಾಡುವ ಬಗ್ಗೆ.

* * * * * * *

2021-22ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗಿರುವ ಬೋಧನಾ ಕಾರ್ಯಭಾರಕ್ಕೆ ಅಗತ್ಯವಿರುವ ಅರ್ಹ ಅತಿಥಿ ಉಪನ್ಯಾಸಕರನ್ನು ಸರ್ಕಾರದ ಆದೇಶದ ಮೇರೆಗೆ ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ.

ಹಲವಾರು ಕಾಲೇಜುಗಳಲ್ಲಿ ವಿವಿಧ ವಿಷಯಗಳಲ್ಲಿ ಇನ್ನೂ ಕಾರ್ಯಭಾರ ಉಳಿಕೆಯಾಗಿರುವುದು ಕಂಡುಬಂದಿದ್ದು, ಈ ಉಳಿಕೆಯಾಗಿರುವ ಕಾರ್ಯಭಾರದ ವಿವರಗಳನ್ನು ಪ್ರಾಂಶುಪಾಲರು ಇಲಾಖೆ ನಿಗಧಿಪಡಿಸಿರುವ ಮಾರ್ಗಸೂಚಿಗಳಂತೆ E.M.I.S. ನಲ್ಲಿ **ದಿನಾಂಕ:10.06.2022 ಅಪರಾಹ್ನ 2:00 ಗಂಟೆಯೊಳಗಾಗಿ Upload ಮಾಡಲು ಸೂಚಿಸಲಾಗಿದೆ.**

ಕಾರ್ಯಭಾರವನ್ನು ಖಾಯಂ ಉಪನ್ಯಾಸಕರು ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ನಿಯಮಾನುಸಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ 2, 4 & 6ನೇ Semester ನ ಕಾರ್ಯಭಾರದ ವಿವರಗಳನ್ನು ಕೆಳಗಿನಂತೆ Upload ಮಾಡಬೇಕಾಗಿರುತ್ತದೆ.

Workload details for 2021-22 (Even Semester (II,IV,VI))

Select Academic Year: 2021-22 Export to Excel

| SlNo. | Subject | 1 Workload Available (UG + PG) | 2 Workload allotted to the Permanent Faculty (Regular, Deputed and Redeployed & For Guest faculty with Court Stay) | 3 Workload ALREADY allotted To EXISTING Guest Faculty | 4 Workload Available For Additional Guest Faculty |
|---|---|---|---|---|---|
| 1 | Arabic (Language) | 0 | 0 | 0 | |
| 2 | Biochemistry | 90 | 60 | 30 | |
| 3 | Biotechnology | 176 | 100 | 76 | |
| 4 | Botany | 270 | 160 | 113 | |
| 5 | Business Management | 0 | 0 | 0 | |
| 6 | Chemistry | 374 | 148 | 190 | |
| 7 | Co-operation | 0 | 0 | 0 | |
| 8 | Commerce | 0 | 0 | 0 | |

(1) Workload Available (UG + PG) (Subject wise)

(2) Workload allotted to Regular Faculty & Guest Faculty on Court Stay Cases

ಈ ಮೇಲಿನ ಚಿತ್ರದಲ್ಲಿ ತೋರಿಸಿರುವ ಕಾಲಂ (3) ರಲ್ಲಿ "Workload already allotted to existing Guest Faculty" ಹಾಗೂ ಕಾಲಂ (4) ರಲ್ಲಿ "Workload available for additional Guest Faculty" (required) ಸಂಖ್ಯೆಯನ್ನು ಖಾತ್ರಿಪಡಿಸಿಕೊಳ್ಳುವುದು.

ಮುಂದುವರೆದು;

- Non-core ಹಾಗೂ Skill enhancement course ವಿಷಯಗಳಿಗೆ ಸಂಬಂಧಿಸಿದ ಕಾರ್ಯಭಾರಕ್ಕೆ ಈಗಾಗಲೇ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳದಿದ್ದಲ್ಲಿ ಅಂತಹ ಕಾರ್ಯಭಾರವನ್ನು ವಿಶ್ವವಿದ್ಯಾಲಯ ನಿಗಧಿಪಡಿಸಿರುವ ವಿಷಯಗಳ ಕಾರ್ಯಭಾರಕ್ಕೆ ಸೇರಿಸಿ upload ಮಾಡುವುದು.

- ಯಾವುದೇ ವಿಷಯದಲ್ಲಿ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಆಯ್ಕೆಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರಿಗೆ ಗರಿಷ್ಠ 15/19 ಗಂಟೆಗಳ ಕಾರ್ಯಭಾರ ನೀಡಬಹುದಾಗಿದೆ. ಕಾಲೇಜಿನಲ್ಲಿ ಲಭ್ಯವಾಗುವ ಕಾರ್ಯಭಾರವನ್ನು ನಿಯಮಾನುಸಾರ ಹಂಚಿಕೆ ಮಾಡಿ, ಕೊನೆಯ ಅತಿಥಿ ಉಪನ್ಯಾಸಕರಿಗೆ 15/19 ಗಂಟೆಗಳಿಗಿಂತ ಕಡಿಮೆ ಕಾರ್ಯಭಾರವನ್ನು ನೀಡಿದಲ್ಲಿ, ನಂತರದಲ್ಲಿ ಹೆಚ್ಚಾಗುವ ಕಾರ್ಯಭಾರವನ್ನು ಸದರಿ ಕೊನೆಯ ಅತಿಥಿ ಉಪನ್ಯಾಸಕರಿಗೆ ಹಂಚಿಕೆ ಮಾಡಬಹುದಾಗಿರುತ್ತದೆ. ಹೀಗೆ ಹಂಚಿಕೆ ಮಾಡಿದ ನಂತರವೂ ಕನಿಷ್ಠ 4 ಗಂಟೆಗಿಂತ ಹೆಚ್ಚಿನ ಕಾರ್ಯಭಾರ ಲಭ್ಯವಾದಲ್ಲಿ ಮಾತ್ರ ಹೆಚ್ಚುವರಿ ಅತಿಥಿ ಉಪನ್ಯಾಸಕರ ನೇಮಕಕ್ಕೆ ಕಾರ್ಯಭಾರದ ವಿವರಗಳನ್ನು EMIS ನಲ್ಲಿ upload ಮಾಡಬಹುದಾಗಿದೆ.

- Court Case ಅಥವಾ ಇತರೆ ಕಾರಣಗಳಿಂದ ಈಗಾಗಲೇ Counselling ಮೂಲಕ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಕಾರ್ಯಭಾರದ ಕೊರತೆ ಉಂಟಾದಲ್ಲಿ ಕಾಲೇಜಿನ ಹಂತದಲ್ಲಿಯೇ ಆಯಾ ವಿಷಯದಲ್ಲಿ ಮೆರಿಟ್ ಲಿಸ್ಟ್ ತಯಾರಿಸಿ ಕಡಿಮೆ ಮೆರಿಟ್‌ನ ಅತಿಥಿ ಉಪನ್ಯಾಸಕರಿಗೆ "No workload" ಅಥವಾ Less than 15/19 hours workload ಎಂದು upload ಮಾಡುವುದು.

ಈ ಮೇಲಿನಂತೆ ಕಾರ್ಯಭಾರದ ವಿವರಗಳನ್ನು Upload ಮಾಡುವಾಗ ಪ್ರಾಂಶುಪಾಲರು ವೈಯಕ್ತಿಕ ಗಮನ ಹರಿಸಿ, ಎಚ್ಚರಿಕೆ ವಹಿಸುವುದು. ಈ ಹಿಂದೆ ಕಾರ್ಯಭಾರದ ವಿವರಗಳನ್ನು ತಪ್ಪಾಗಿ upload ಮಾಡಿರುವ ಹಲವು ಕಾಲೇಜುಗಳ ಪ್ರಾಂಶುಪಾಲರಿಗೆ ಈಗಾಗಲೇ ಶಿಸ್ತು ಕ್ರಮ ಪಕ್ರಿಯೆ ಜಾರಿಯಲ್ಲಿರುವುದನ್ನು ಗಮನಿಸಬಹುದಾಗಿದೆ. ಆದ್ದರಿಂದ ಯಾವುದೇ ಲೋಪ ವಿಲ್ಲದೆ ಕಾರ್ಯಭಾರದ ವಿವರಗಳನ್ನು Upload ಮಾಡಲು ಈ ಮೂಲಕ ತಿಳಿಸಲಾಗಿದೆ.

08/06/2022

**ಮುಖ್ಯ ಆಡಳಿತಾಧಿಕಾರಿಗಳು**
ಕಾಲೇಜು ಶಿಕ್ಷಣ ಇಲಾಖೆ

**ಇವರಿಗೆ; ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ;**

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
4) ಕಛೇರಿ ಪ್ರತಿ